


## ನಕ್ಕು ಬಿಡಿ



ಮಂಟಾ ಟಿ.ವಿ. ಅಂಗಡಿಯಾತನಿಗೆ: ನಿಮ್ಮಲ್ಲಿ ಕಲರ್ ಟಿ.ವಿ. ಸಿಗುತ್ತದೆಯೆ?

ಅಂಗಡಿಯಾತ: ಖಂಡಿತ ಸಾರ್.

ಮಂಟಾ: ನನಗೊಂದು ಹಸಿರು ಬಣ್ಣದ ಟಿ.ವಿ. ಕೊಡಿ.

★★★

ಸಂತಾ ಕಾಲೇಜೊಂದನ್ನು ಪ್ರಾರಂಭಿಸಿದ. ಆದರೆ ವಿದ್ಯಾರ್ಥಿಗಳಿಗೆ ಅಲ್ಲಿ ಯಾವ ವಿಷಯಕ್ಕೆ ಪ್ರವೇಶ ಪಡೆಯಬೇಕೆಂಬುದೆ ಗೊಂದಲವಾಯಿತು. ಯಾಕೆಂದರೆ ಆ ಕಾಲೇಜು, 'ಸರ್ದಾರ್ ಮೆಡಿಕಲ್ ಕಾಲೇಜ್ ಆಫ್ ಎಂಜಿನಿಯರಿಂಗ್' ಎಂಬ ಹೆಸರನ್ನು ಹೊಂದಿತ್ತು.

★★★

ಪುಂಡ: ಯಾವ ಊರು ನಿಮ್ದು?

ಗುಂಡ: ಇಲ್ಲೆ, ಬೆಂಗಳೂರು ಹತ್ರ ಮಂಗಳೂರು. ನಿಮ್ದು?

ಪುಂಡ: ನಮ್ದೂ ಇಲ್ಲೆ ಯಲಹಂಕ ಹತ್ರ ಶ್ರೀಲಂಕ.

-ಶೀಲಾ ಸತ್ಯೇಂದ್ರ ಸ್ವಾಮಿ, ಹರವೆಮಠ




'ಎದುರು ಮನೆಯ ಗಂಡ ಹೆಂಡತಿ ಜಗಳವಾಡುತ್ತಿರುವಂತೆ ತೋರುತ್ತದೆ. ಸ್ವಲ್ಪ ಹೋಗಿ ಸಮಾಧಾನ ಮಾಡಿ ಬನ್ನಿರಲ್ಲ.' ಸಂತಾನ ಹೆಂಡತಿ ಸಂತಾನಿಗೆ ಹೇಳಿದಳು.

'ಆತನಿಲ್ಲದಿದ್ದಾಗ ನಾಲ್ಕೈದು ಬಾರಿ ನಾನು ಅವರ ಮನೆಗೆ ಹೋಗಿ ಬಂದಿದ್ದೇನೆ ಅದಕ್ಕೆ ಈ ಜಗಳ' ಎಂದು ಸಂತಾ ಹೇಳಿದ.

★★★

ಒಬ್ಬ ವ್ಯಕ್ತಿ 'ಆತ್ಮಹತ್ಯೆ' ಮಾಡಿಕೊಳ್ಳಲು ರೈಲು ಹಳಿಯ ಮೇಲೆ ಮಲಗಿದ್ದ. ಅದನ್ನು ಕಂಡ ಸ್ಟೇಶನ್ ಮಾಸ್ಟರ್ 'ರೈಲು ಹಳಿಯ ಮೇಲೆ ಏಕೆ ಮಲಗಿರುವೆ?' ಎಂದು ಕೇಳಿದ.



ಆಗ ಆ ವ್ಯಕ್ತಿ 'ನಾನು ಜೀವನದಲ್ಲಿ ಏನು ಮಾಡಬೇಕೆಂದು ಅಂದುಕೊಳ್ಳುವೆನೋ ಅದು ಆಗುವುದಿಲ್ಲ' ಆದ್ದರಿಂದ ಜೀವನ ಬೇಸರವಾಗಿ 'ಆತ್ಮಹತ್ಯೆ' ಮಾಡಿಕೊಳ್ಳಬೇಕೆಂದಿದ್ದೇನೆ ಎಂದ.

ನೀನು ಅಂದುಕೊಂಡದ್ದು ಇವತ್ತು ಕೂಡ ಆಗುವದಿಲ್ಲ. ಏಕೆಂದರೆ 'ಇವತ್ತು ರೈಲ್ವೆ ಹರತಾಳ ಇದೆ' ಎಂದ ಸ್ಟೇಶನ್ ಮಾಸ್ಟರ್.

-ಮುರಲೀಧರ ಕುಲಕರ್ಣಿ, ಬೀದರ್